## ಗುರುಪ್ರಸಾದ್‌ರ 'ನಾಲ್ಕನೇ ಸಲ'

ಗುರುಪ್ರಸಾದ್ ನಿರ್ದೇಶನದ 'ಎರಡನೇ ಸಲ' ತೆರೆಕಾಣುವ ಹೊಸ್ತಿಲಲ್ಲಿದೆ. ಅದಕ್ಕೆ ಮುನ್ನುಡಿಯಾಗಿ, ಚಿತ್ರತಂಡ ಬಿಡುಗಡೆ ಮಾಡಿರುವ ಟ್ರೈಲರ್ ಸಾಕಷ್ಟು ಜನಪ್ರಿಯತೆ ಗಳಿಸಿದೆ. ಧನಂಜಯ್ ಹಾಗೂ ಸಂಗೀತಾ ಭಟ್ ಚಿತ್ರದ ನಾಯಕ–ನಾಯಕಿ.

ಗುರುಪ್ರಸಾದ್‌ರ 'ಡೈರೆಕ್ಟರ್ ಸ್ಪೆಷಲ್' ಚಿತ್ರದಲ್ಲಿ ಧನಂಜಯ್ ನಾಯಕರಾಗಿ ನಟಿಸಿದ್ದರು. ಈಗ ಎರಡನೇ ಸಲ ಗುರು–ಧನಂಜಯ್ ಜೋಡಿ ಮತ್ತೆ ಜೊತೆಯಾಗಿದೆ. ಗುರು ಅವರ ಗರಡಿಯಲ್ಲಿ ಕೆಲಸ ಮಾಡುವುದು ಸುಖ–ಸಮೃದ್ಧಿಯ ಅನುಭವ ಎನ್ನುವುದು ಧನಂಜಯ್ ಅನುಭವ. 'ತುಂಟಾಟ ಹಾಗೂ ತರಲೆ ಎರಡನ್ನೂ ಕಣ್ತುಂಬಿಸುವ ಸಿನಿಮಾ' ಎಂದವರು ಚಿತ್ರದ ಬಗ್ಗೆ ಹೇಳುತ್ತಾರೆ.

'ಪ್ರೀತಿ ಗೀತಿ ಇತ್ಯಾದಿ' ಚಿತ್ರದಲ್ಲಿ ನಟಿಸಿದ್ದ ಸಂಗೀತಾ ಭಟ್ 'ಎರಡನೇ ಸಲ' ಚಿತ್ರದ ನಾಯಕಿ. ಮೊದಲ ಚಿತ್ರದ ರೆಫರೆನ್ಸ್ ಅವರಿಗೆ ಎರಡನೇ ಚಿತ್ರದ ಅವಕಾಶ ತಂದುಕೊಟ್ಟಿಲ್ಲ. 'ಲೈಫ್ ಸೂಪರ್ ಗುರು' ಎನ್ನುವ ಕಿರುತೆರೆಯ ರಿಯಾಲಿಟಿ ಷೋ ಒಂದರಲ್ಲಿ ಭಾಗವಹಿಸಿದ್ದ ಸಂಗೀತಾ ಅವರ ಪ್ರತಿಭೆಯನ್ನು ಮೆಚ್ಚಿಕೊಂಡು, ನಿರ್ದೇಶಕರು ತಮ್ಮ ಚಿತ್ರದಲ್ಲಿ ಅವಕಾಶ ನೀಡಿದ್ದಾರೆ. ಮೇಕಪ್ ಹಾಕಿಕೊಳ್ಳದೆಯೇ ಅವರು ಚಿತ್ರದಲ್ಲಿ ನಟಿಸಿದ್ದಾರಂತೆ. ಧನಂಜಯ್ ಜೊತೆ ನಟಿಸಿರುವುದೂ ಅವರಿಗೆ ಖುಷಿ ಕೊಟ್ಟಿದೆ. ಹಿರಿಯ ನಟಿ ಲಕ್ಷ್ಮಿ ಕೂಡ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ.

'ಎರಡನೇ ಸಲ' ನಿರ್ದೇಶಕರಾಗಿ ಗುರುಪ್ರಸಾದ್‌ರ ನಾಲ್ಕನೇ ಸಿನಿಮಾ. ಹಾಸ್ಯದ ನೆಲೆಗಟ್ಟಿನಲ್ಲಿ ಸಂಬಂಧಗಳ ಮಹತ್ವವನ್ನು ಮನಗಾಣಿಸುವುದು ಗುರುಪ್ರಸಾದ್‌ರ ಹಿಂದಿನ ಮೂರು ಚಿತ್ರಗಳಲ್ಲಿನ ಸಾಮಾನ್ಯ ಅಂಶ. ಈ ಚಿತ್ರದಲ್ಲೂ ಮನುಷ್ಯ ಸಂಬಂಧಗಳ ಪ್ರಸ್ತಾಪವಿದೆಯಂತೆ. ಅಮ್ಮ–ಮಗನ ನಂಟಿನ ಜೊತೆಗೆ ವೃದ್ಧಾಶ್ರಮದ ಎಳೆಯೂ ಕಥೆಯಲ್ಲಿದೆಯಂತೆ. ಅನೂಪ್ ಸೀಳಿನ್ ಸಂಗೀತ ಹಾಗೂ ಅಶೋಕ್ ಗೌತಮ್ ಛಾಯಾಗ್ರಹಣ ಚಿತ್ರಕ್ಕಿದೆ.



## ಹಳೆಯ ಪ್ರೇಮ, ಹೊಸ ಶ್ರೀನಿವಾಸ!

ಗಾಂಧಿನಗರದಲ್ಲೀಗ ಟ್ರೈಲರ್‌ಗಳ ಸುಗ್ಗಿ. ಪ್ರಚಾರದ ಭಾಗವಾಗಿ ರೂಪುಗೊಳ್ಳುತ್ತಿರುವ ಟ್ರೈಲರ್‌ಗಳು, ಸಿನಿಮಾಗಳ ಪ್ರಚಾರದ ಪರಿಣಾಮಕಾರಿ ಮಾಧ್ಯಮವಾಗಿ ರೂಪುಗೊಳ್ಳುತ್ತಿವೆ. ಟ್ರೈಲರ್‌ಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಹಾಗೂ ಟ್ರೈಲರ್‌ಗಳ ಮೂಲಕ ಅಭಿಪ್ರಾಯ ರೂಪಿಸುವ ಕೆಲಸವೂ ನಡೆಯುತ್ತಿದೆ. ಈ ಸಾಲಿಗೆ ಇತ್ತೀಚಿನ ಸೇರ್ಪಡೆ – 'ಶ್ರೀನಿವಾಸ ಕಲ್ಯಾಣ' ಚಿತ್ರದ ಟ್ರೈಲರ್.



ಎಂ.ಜಿ. ಶ್ರೀನಿವಾಸ್ ಚಿತ್ರದ ನಿರ್ದೇಶಕ. ಗೆಳೆಯರ ಗುಂಪಿನಲ್ಲಿ ಅವರು 'ಶ್ರೀನಿ' ಎಂದೇ ಜನಪ್ರಿಯರು. 'ದೇವರಾಣೆಗೂ ಇದು ದೇವರ ಸಿನಿಮಾ' ಅಲ್ಲ ಎನ್ನುವುದು ಶೀರ್ಷಿಕೆಗೆ ಸಂಬಂಧಿಸಿದಂತೆ ಅವರು ನೀಡುವ ಸ್ಪಷ್ಟನೆ. ತಮ್ಮ ಚಿತ್ರವನ್ನು ಅವರು – 'ಪ್ರೇಮಕಥನದ ಚಿತ್ರ' ಹಾಗೂ 'ಟೆಕ್ನೀಷಿಯನ್‌ಗಳ ಸಿನಿಮಾ' ಎನ್ನುವ ಎರಡು ವಿಶೇಷಣಗಳನ್ನು ಬಳಸಿ ಬಣ್ಣಿಸುತ್ತಾರೆ. 'ಅಪ್ಪಟ ಪ್ರೇಮಕಥೆಯ ಚಿತ್ರ' ಎನ್ನುವುದು ವಸ್ತುವಿಗೆ ಸಂಬಂಧಿಸಿದ ಬಣ್ಣನೆ. ತಂತ್ರಜ್ಞರ ಬಂಡವಾಳವೂ ತೊಡಗಿರುವುದರಿಂದ ಇದು 'ಟೆಕ್ನೀಷಿಯನ್‌ಗಳ ಸಿನಿಮಾ' ಕೂಡ.

ನಿರ್ದೇಶನದ ಜೊತೆಗೆ ನಾಯಕ ನಟನಾಗಿಯೂ ಶ್ರೀನಿವಾಸ್ ನಟಿಸಿದ್ದಾರೆ. ಕವಿತಾ ಮತ್ತು ನಿಖಿಲಾ ರಾವ್ ಚಿತ್ರದ ನಾಯಕಿಯರು. ನಿಖಿಲಾಗೆ ಸಿನಿಮಾ ಹೊಸತು. ಕವಿತಾ ಅವರಿಗೆ ಸಿನಿಮಾ ಹೊಸತಾದರೂ, ದೃಶ್ಯಮಾಧ್ಯಮ ಹೊಸತೇನೂ ಅಲ್ಲ. ಕಿರುತೆರೆಯ 'ಲಕ್ಷ್ಮೀಬಾರಮ್ಮ' ಧಾರಾವಾಹಿಯ ಮೂಲಕ ಸಾಕಷ್ಟು ಜನಪ್ರಿಯತೆ ಗಳಿಸಿದ್ದಾರೆ. ಈಗ ಬೆಳ್ಳಿತೆರೆಯ ಸಖ್ಯ ಅವರಲ್ಲಿ ಹೊಸ ಕನಸುಗಳನ್ನು ಚಿಗುರಿಸಿದೆ.

ರಘು ಥಾಣೆ ಹಾಗೂ ಮಿಥುನ್ ಮುಕುಂದನ್ ಜೋಡಿ ಚಿತ್ರಕ್ಕೆ ಸಂಗೀತ ನೀಡಿದೆ. ಅಶ್ವಿನ್ ಕಡಂಬೂರ್ ಛಾಯಾಗ್ರಹಣ ಚಿತ್ರಕ್ಕಿದೆ. ಫೆಬ್ರುವರಿಯ 'ಪ್ರೇಮಿಗಳ ದಿನ'ದ ಆಸುಪಾಸಿನಲ್ಲಿ ಚಿತ್ರವನ್ನು ತೆರೆಕಾಣಿಸುವ ಪ್ರಯತ್ನ ಚಿತ್ರತಂಡದ್ದು.